# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ. ಎಸ್.ಎಲ್.ಭೋಜೇಗೌಡ(ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 617 |
| ಉತ್ತರಿಸಬೇಕಾದ ದಿನಾಂಕ | 12.03.2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಿಯಲ್ ಎಸ್ಟೇಟ್ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯಿದೆಯ ಮಾನದಂಡಗಳು ಮತ್ತು ನಿಯಮಗಳೇನು; ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ ವಿಧಿಸುವ ಪರಿಹಾರ ಮೊತ್ತ ಎಷ್ಟು; | ಕೇಂದ್ರ ಸರ್ಕಾರವು ಗ್ರಾಹಕರ ಹಿತಾಸಕ್ತಿಗಾಗಿ ರಿಯಲ್ ಎಸ್ಟೇಟ್ ವಲಯವನ್ನು ನಿಯಂತ್ರಿಸಲು ಮತ್ತು ಪಾರದರ್ಶಕತೆಯನ್ನು ತರಲು ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ಜಾರಿಗೆ ತಂದಿರುತ್ತದೆ. ಅದರಂತೆ ರಾಜ್ಯದಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017ಅನ್ನು ದಿನಾಂಕ:11.07.2017ರಿಂದ ಜಾರಿಗೆ ಬರುವಂತೆ ರೂಪಿಸಲಾಗಿರುತ್ತದೆ.<br>ಪ್ರಾಧಿಕಾರವು ರೇರಾ ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸುವ ಪ್ರತಿಯೊಬ್ಬ ಬಿಲ್ಡರ್‌ಗಳಿಗೂ ಪ್ರಕರಣವಾರು ದಂಡ ವಿಧಿಸಿ, ಸದರಿ ಮೊತ್ತವನ್ನು ಭೂಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಕಾರ್ಯಗತ ಆದೇಶವನ್ನು ಹೊರಡಿಸುತ್ತದೆ. ಅಂತಹ ಭೂಕಂದಾಯದ ಬಾಕಿ ಮೊತ್ತವನ್ನು ವಸೂಲಿ ಮಾಡಲು ಅಧಿಕಾರ ಹೊಂದಿರುವ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ರೆವಿನ್ಯೂ ರಿಕವರಿ ಸರ್ಟಿಫಿಕೇಟ್‌ಗಳೊಂದಿಗೆ ಕಳುಹಿಸಿಕೊಡಲಾಗುತ್ತದೆ.<br><br>ಸದರಿ ಮೊತ್ತವನ್ನು ಭೂಕಂದಾಯದ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ನಿಯಮಗಳಲ್ಲಿ ಅವಕಾಶ ಇರುವುದರಿಂದ ಈ ಮೊತ್ತವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ವಸೂಲಿ ಮಾಡಿ ರೇರಾಗೆ ಜಮೆ ಮಾಡುತ್ತಾರೆ. |

| | | |
|---|---|---|
| (ಆ) | 'ಕೆ-ರೇರಾ' ಈವರೆಗೆ ವಿಧಿಸಲಾದ ದಂಡದ ಮೊತ್ತವೆಷ್ಟು ಹಾಗೂ ಎಷ್ಟು ಜನ ಬಿಲ್ಡರ್‌ಗಳಿಗೆ ವಿಧಿಸಿದೆ; | ದಿನಾಂಕ:31.12.2024ರ ಅಂತ್ಯಕ್ಕೆ ಒಟ್ಟು 1660 ಪ್ರಕರಣಗಳಲ್ಲಿ ರೂ.758,85,87,682/-ಗಳ ಮೊತ್ತವನ್ನು ಭೂಕಂದಾಯ ಬಾಕಿ ಎಂದು 278 ಬಿಲ್ಡರ್‌ಗಳಿಗೆ ಸಂಬಂಧಪಟ್ಟಂತೆ ವಸೂಲಾತಿ ಆದೇಶ ಹೊರಡಿಸಲಾಗಿದೆ. |
| (ಇ) | ಇದರಿಂದ ವಸೂಲಿ ಆದ ಮತ್ತು ಆಗದೇ ಉಳಿದಿರುವ ಮೊತ್ತ ಎಷ್ಟು; ಬಾಕಿ ಉಳಿಯಲು ಕಾರಣಗಳೇನು; | ದಿನಾಂಕ:31.12.2024ರ ಅಂತ್ಯಕ್ಕೆ 1660 ಪ್ರಕರಣಗಳ ಪೈಕಿ 103 ಪ್ರಕರಣಗಳಲ್ಲಿ ಲೋಕ್ ಅದಾಲತ್‌ನಲ್ಲಿ ರಾಜಿ ಮೂಲಕ ರೂ.54,66,59,913/-ಗಳು ವಸೂಲಿ ಮಾಡಲಾಗಿದೆ. ಹಾಗೂ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ 130 ಪ್ರಕರಣಗಳಲ್ಲಿ ರೂ.37,21,87,582/-ಗಳು ವಸೂಲಿ ಮಾಡಲಾಗಿರುತ್ತದೆ. ಹೀಗೆ ಒಟ್ಟು 233 ಪ್ರಕರಣಗಳಿಂದ ಒಟ್ಟು ರೂ.91,88,47,495/-ಗಳು ವಸೂಲಾತಿಯಾಗಿರುತ್ತದೆ. ದಿನಾಂಕ:31.12.2024ರ ಅಂತ್ಯಕ್ಕೆ 1427 ಪ್ರಕರಣಗಳಿಂದ ಒಟ್ಟು ರೂ.666,97,40,187/-ಗಳ ಭೂಕಂದಾಯ ಬಾಕಿ ವಸೂಲಿ ಮಾಡಲು ಬಾಕಿ ಇರುತ್ತದೆ. |
| (ಈ) | ಹಾಗಿದ್ದಲ್ಲಿ, ಸಂಬಂಧಪಟ್ಟ ಬಿಲ್ಡರ್‌ಗಳ ವಿರುದ್ಧ ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳದಿರಲು ಯಾರದಾದ್ರು ಒತ್ತಡವಿದೆಯೇ; ಹಾಗಿದ್ದಲ್ಲಿ ಯಾವ ಕಾಲಮಿತಿಯಲ್ಲಿ ಪರಿಣಾಮಕಾರಿಯಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಲಾಗುವುದು? | ಯಾವುದೇ ಒತ್ತಡ ಇರುವುದಿಲ್ಲ.<br><br>ವಸೂಲಾತಿಯನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಒಂದು ಅಧಿಕಾರಯುಕ್ತ ವಿಶೇಷ ಕೋಶವನ್ನು ರಚಿಸುವ ಕುರಿತು ಕಂದಾಯ ಇಲಾಖೆ ಮತ್ತು ಆರ್ಥಿಕ ಇಲಾಖೆಯೊಡನೆ ಸಮಾಲೋಚನೆ ನಡೆಸಲಾಗುತ್ತಿದೆ. |

[ಸಂಖ್ಯೆ: ವಇ 34 ರೇರಾ 2025]

**(ಬಿ.ಜೆಡ್. ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್, ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು